# ಕನ್ನಡ ಪಠ್ಯ ವಸ್ತು ಮತ್ತು ಪಠ್ಯ ಪುಸ್ತಕ ಪರಿಷ್ಕರಣ ಸಮಿತಿಯ ಸಲಹೆಗಳು

ಪ್ರೌಢಶಿಕ್ಷಣದ ನಂತರ ವಿದ್ಯಾರ್ಥಿಗಳು ಭೌದ್ಧಿಕವಾಗಿ ಹಾಗೂ ಶೈಕ್ಷಣಿಕವಾಗಿ ಪರಿವರ್ತಿತವಾಗುತ್ತಿರುವ ಘಟ್ಟದ ಸಂಕ್ರಮಣ ಸ್ಥಿತಿಯನ್ನು ಪ್ರವೇಶ ಮಾಡುತ್ತಿರುವ ಹಂತವನ್ನು ತಲುಪಿರುತ್ತಾರೆ, ಈ ಹಂತದಲ್ಲಿ ವಿದ್ಯಾರ್ಥಿಗಳು ಮೊದಲನೆ ಪಿ.ಯು.ಸಿ ಹಾಗೂ ಎರಡನೇ ಪಿ.ಯು.ಸಿಗಳೆಂಬ ಎರಡು ಘಟಕಗಳನ್ನು ಹಾಯ್ದು ಮುಂದಿನ ಹಂತಕ್ಕೆ ಪ್ರವೇಶ ಮಾಡುವ ಸಿದ್ದತೆಯ ಮನಸ್ಥಿತಿಯನ್ನು ರೂಢಿಸಿಕೊಳ್ಳುವ ಪ್ರಯತ್ನಗಳಲ್ಲಿ ಮುಳುಗಿರುತ್ತಾರೆ. ಆದ್ದರಿಂದ ಪದವಿ ಪೂರ್ವ ಹಂತವನ್ನು ಪರಿವರ್ತಿತ ಹಾಗೂ ಸಂಕ್ರಮಣ ಘಟ್ಟವೆಂದು ಕರೆಯಲಾಗುತ್ತದೆ. ಈ ಹಂತದಲ್ಲಿ ವಿದ್ಯಾರ್ಥಿಗಳು ದೈಹಿಕವಾಗಿ, ಮಾನಸಿಕವಾಗಿ, ಭೌದ್ಧಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಪ್ರಬಲಶಕ್ತಿ ಸಂಚಯಿಸುವ ಸ್ಥಿತಿಯಲ್ಲಿರುತ್ತಾರೆ.

ಕರ್ನಾಟಕ ರಾಜ್ಯ ಪದವಿ ಪೂರ್ವಶಿಕ್ಷಣ ಇಲಾಖೆಯು 2012–2013ನೇ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳುವ ನಿಟ್ಟಿನ ಪ್ರಯತ್ನವಾಗಿ ವಿಜ್ಞಾನ ವಿಷಯಗಳಾದ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಹಾಗೂ ಜೀವಶಾಸ್ತ್ರಗಳ ಪಠ್ಯವಸ್ತು ಪರಿಷ್ಕರಿಸಿ ಇಲಾಖೆಯಿಂದಲೆ ಪಠ್ಯಪುಸ್ತಕ ಸಿದ್ದಪಡಿಸಿ ಜಾರಿಗೆ ತರಲಾಗಿದೆ.

ಇಲಾಖೆಯು ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಪಠ್ಯವಸ್ತು ಮತ್ತು ಪಠ್ಯಪುಸ್ತಕ ಪರಿಷ್ಕರಿಸುವ ನಿಟ್ಟಿನಲ್ಲಿ ಕಾರ್ಯಮುಖವಾಗಿರುವುದು ಸಂತೋಷದ ವಿಷಯ ಅದರಂತೆ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯು ಸಭೆಯನ್ನು ಸೇರಿ ಮುಕ್ತವಾದ ಚರ್ಚೆಯನ್ನು ನಡೆಸಿದೆ. ಸುದೀರ್ಘವಾದ ಚರ್ಚೆಗಳ ನಂತರ, ಕೂಲಂಕಷ ಅಧ್ಯಯನ ನಡೆಸಲಾಯಿತು. ಚರ್ಚೆ ಹಾಗೂ ಅಧ್ಯಯನಗಳ ನಂತರ, ಕನ್ನಡ ಸಾಹಿತ್ಯ ಚರಿತ್ರೆಯ ಕಾಲಾನುಕ್ರಮಣಿಕನ್ನು ಅನುಸರಿಸಿ, ಕನ್ನಡ ಭಾಷೆಯ ಅವಸ್ಥಾಂತರ, ಕಾಲಘಟ್ಟ, ಪ್ರಭೇದ, ಸಾಹಿತ್ಯದ ಚಳುವಳಿ, ಸ್ವರೂಪ ಹಾಗೂ ಸಂವೇದನೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರಥಮ ಹಾಗೂ ದ್ವಿತೀಯ ಪಿ.ಯು.ಸಿ. ತರಗತಿಗಳಿಗೆ ಪಠ್ಯವಸ್ತು ಪರಿಷ್ಕರಣೆಯನ್ನು ಮಾಡಿ, ಕೆಳಕಂಡಂತೆ ನಿಗಧಿಗೊಳಿಸಲು ಸಭೆಯಲ್ಲಿ ತೀರ್ಮಾನ ಮಾಡಲಾಯಿತು.

ಸಭೆಯ ನಿರ್ಣಯದಂತೆ ಪ್ರಥಮ ಪಿ.ಯು.ಸಿ. ಪಠ್ಯದಲ್ಲಿ ಆಯ್ಕೆಯಾದ ಕವಿಗಳು, ಲೇಖಕರ ಕೃತಿಗಳು ಹಾಗೂ ಲೇಖಕರು, ದ್ವಿತೀಯ ಪಿ.ಯು.ಸಿ. ಪಠ್ಯದಲ್ಲಿ ಪುನರಾವರ್ತನೆಯಾಗದಂತೆ ಎಚ್ಚರಿಕೆ ವಹಿಸುವತ್ತ ತೀವ್ರ ಗಮನಹರಿಸಬೇಕು. ಎರಡು ವರ್ಷಗಳ ಅವಧಿಯನ್ನು ಎರಡು ಘಟಕಗಳೆಂದು ಪರಿಗಣಿಸಲು ತೀರ್ಮಾನಿಸಲಾಯಿತು.

ಎರಡು ವರ್ಷದ ಅವಧಿಯಲ್ಲೂ ಕನ್ನಡ ಸಾಹಿತ್ಯದ ಎಲ್ಲ ಬಗೆಯ ಸಂವೇದನೆಗಳು ಪ್ರಾತಿನಿಧಿಕವಾಗಿರುವಂತೆ ನೋಡಿಕೊಳ್ಳುವುದು ಹಾಗೂ ಪ್ರಾತಿನಿಧಿಕ ಕೃತಿ ಹಾಗೂ ಕವಿಗಳು ಪರಿಸ್ಪರ ಪೂರಕವಾಗಿರುವಂತೆ ಆಯ್ಕೆ ಮಾಡಬೇಕು. ಸಾಧ್ಯವಿರುವಷ್ಟು ಹಿಂದಿನ ಪಠ್ಯಗಳಲ್ಲಿರುವ ಭಾಗಗಳು ಹಾಗೂ ಕವಿಗಳನ್ನು ಬಿಟ್ಟು ಬೇರೆ ಆಯ್ಕೆ ಸೂಕ್ತವೆಂದು ಭಾವಿಸಲಾಗಿದೆ. ಪಠ್ಯ ವಸ್ತು ರಚನಾ ಉದ್ದೇಶಗಳು ಹಾಗೂ ಪ್ರಕ್ರಿಯೆಗಳನ್ನು ಸಾಮಾನ್ಯ ಉದ್ದೇಶ ನಿರ್ದಿಷ್ಟ ಉದ್ದೇಶ, ವಿಶ್ಲೇಷಣೆ, ಅಭಿವ್ಯಕ್ತಿ ಪ್ರಕ್ರಿಯೆ ವರ್ಗ, ಲಿಂಗ, ಹಂತಗಳು, ಸಾಮಾನ್ಯ, ಕ್ಲಿಷ್ಠ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅವುಗಳನ್ನು ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

ಸಾಮಾನ್ಯ ಉದ್ದೇಶಗಳು:

೧. ಸಾಹಿತ್ಯಾಸಕ್ತಿ–ಭಾಷಾ ನೈಪುಣ್ಯಗಳನ್ನು ರೂಪಿಸಿಕೊಳ್ಳುವುದು.
೨. ನುಡಿಗಟ್ಟುಗಳು, ಗಾದೆಮಾತುಗಳು, ಸೂಕ್ತಿಗಳು ನಾಣ್ನುಡಿಗಳು, ಸುಭಾಷಿತಗಳನ್ನು ಸಂಗ್ರಹಿಸಿ, ಅರ್ಥೈಸಿ ದಿನ ನಿತ್ಯದ ವ್ಯವಹಾರದಲ್ಲಿ ಬಳಕೆ.
೩. ಪತ್ರಿಕೆ, ಅಕಾಶವಾಣಿ, ದೂರದರ್ಶನ ಇತ್ಯಾದಿ ಪ್ರಸಾರ ಮಾಧ್ಯಮಗಳನ್ನು ಆಸಕ್ತಿಯಿಂದ ಗಮನಿಸಿ, ಅ ಮೂಲಕ ಭಾಷಾ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವುದು.
೪. ಆಧುನಿಕ ಜೀವನದ ಅಗತ್ಯಗಳಾದ ಜ್ಞಾನ, ವಿಜ್ಞಾನ, ತಂತ್ರಜ್ಞಾನಗಳನ್ನು ಅರ್ಥೈಸಿಕೊಳ್ಳಲು ಅವಶ್ಯವಾದ ನೆಲೆಗಟ್ಟನ್ನು ಒದಗಿಸುವುದು.
೫. ಪ್ರಸ್ತುತ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ವಿಚಾರಗಳ ಅರಿವನ್ನು ಮೂಡಿಸುವುದು.

೬. ಜೀವನದಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ತಿಳಿಸುವುದು.
೭. ಸಾಹಿತ್ಯಾಭ್ಯಾಸದಿಂದ ಮಾನವಿಯ ಸಂಬಂಧಗಳ ಅರಿವು ಮೂಡಿಸುವುದು.
೮. ಸೌಂದರ್ಯ ಪ್ರಜ್ಞೆ, ಕಲ್ಪನೆ, ಸೃಜನಶೀಲತೆಯನ್ನು ಅರಿತು ಸ್ವಂತಿಕೆಯನ್ನು ಬೆಳಸಿಕೊಳ್ಳುವುದು.
೯. ನಾಡು–ನುಡಿ, ರಾಷ್ಟ್ರೀಯತೆ, ಜನಸಮೂಹದ ಮೇಲೆ ಪ್ರೀತಿ ಹಾಗು ದೇಶಾಭಿಮಾನಗಳನ್ನು ಬೆಳಸಿಕೊಳ್ಳುವ ಅರಿವು ಮೂಡಿಸುವುದು.
೧೦. ಅಭ್ಯಾಸ ಮಾಡಿದ್ದನ್ನು ಗ್ರಹಿಸುವ ಹಾಗೂ ಅಭಿವ್ಯಕ್ತ ಪಡಿಸುವ ಕಲಾತ್ಮಕ ಗುಣವನ್ನು ಬೆಳಸುವುದು.
೧೧. ಶಬ್ದಕೋಶವನ್ನು ಬಳಸುವ ಆ ಮೂಲಕ ಶಬ್ದಗಳ ರೂಪ ಅರ್ಥ, ವ್ಯತ್ಯಾಸಗಳನ್ನು ತಿಳಿದುಕೊಳ್ಳುವ ಗುಣವನ್ನು ಬೆಳಸಿಕೊಳ್ಳುವುದು.
೧೨. ಸಾಹಿತ್ಯಾಸಕ್ತಿ, ಸಾಹಿತ್ಯಾಭಿರುಚಿ ಮೂಡಿಸುವ ಕೃತಿಗಳನ್ನು ಪರಿಚಯಿಸುವುದು.

ನಿರ್ದಿಷ್ಟ ಉದ್ದೇಶಗಳು

೧. ಕನ್ನಡ ಭಾಷೆ ಸಾಹಿತ್ಯ ಹಾಗು ಅದರ ಪರಂಪರೆಗಳ ಅರಿವು ಮೂಡಿಸುವುದು.
೨. ಕನ್ನಡದ ಹೊಸಪದ ಹಾಗೂ ನುಡಿಗಟ್ಟುಗಳನ್ನು ಗುರುತಿಸುವುದು.
೩. ಪ್ರಾಯೋಗಿಕ ನೆಲೆಯಲ್ಲಿ ಕನ್ನಡ ವ್ಯಾಕರಣ ಪರಿಚಯ ಮಾಡಿಸುವುದು.
೪. ಕನ್ನಡ ಭಾಷೆಯ ಮೂಲ ಹಾಗೂ ಅದರ ವಿವಿಧ ಅವಸ್ಥೆಗಳ, ಬೆಳವಣಿಗೆಯ ಪರಿಚಯ ಮಾಡಿಸುವುದು.
೫. ಕನ್ನಡ ಸಾಹಿತ್ಯ ಪ್ರಕಾರಗಳ ಸ್ವರೂಪ ಮತ್ತು ಬೆಳವಣಿಗೆಯ ಮಾಹಿತಿ ನೀಡುವುದು.
೬. ಪಠ್ಯದಲ್ಲಿ ನಿರೂಪಿತವಾದ ವಸ್ತು, ವಿಚಾರ, ಭಾವ, ಅಭಿವ್ಯಕ್ತಿ ವಿಧಾನಗಳ ವಿವರಣೆ.
೭. ಆಯಾಕಾಲದ ಸಾಹಿತ್ಯ ಹಾಗೂ ಜನಜೀವನ ಸಂಬಂಧ, ಜೀವನ ಮೌಲ್ಯಗಳ ಪರಿಚಯ ಮಾಡಿಸುವುದು.

ವಿಶ್ಲೇಷಣೆ

೧. ಪಠ್ಯದಲ್ಲಿ ಬಳಕೆಯಾಗಿರುವ ವಿವಿಧ ಪದಗಳ, ನುಡಿಗಟ್ಟುಗಳ ಗಾದೆ ಮಾತುಗಳ ಮತ್ತು ಒಗಟುಗಳ ಅರ್ಥ ಹಾಗೂ ವಿಶಿಷ್ಟಾರ್ಥಗ್ರಹಿಸುವುದು.
೨. ಕಾವ್ಯದ ವಿವಿಧ ಅಂಗಗಳಾದ ವ್ಯಾಕರಣ ಅಲಂಕಾರ, ಛಂದಸ್ಸು, ಶೈಲಿ, ಭಾಷಾ ಸೌಂದರ್ಯಗಳ ಪ್ರಜ್ಞೆ ಮೂಡಿಸಿ, ಅವುಗಳ ಬಳಕೆಯ ವೈಶಿಷ್ಟ್ಯ ತಿಳಿಸುವುದು.
೩. ವಾಕ್ಯ ರಚನೆಯ ವಿವಿಧ ರೂಪಗಳಾದ ಸರಳ, ಸಂಯುಕ್ತ, ಸಂಕೀರ್ಣ ವಾಕ್ಯಗಳನ್ನು ತಿಳಿಸುವುದು.
೪. ಭಾಷಾ ದೋಷಗಳು ಮತ್ತು ಅವುಗಳ ನಿವಾರಣೋಪಾಯಗಳನ್ನು ತಿಳಿಸುವುದು.

ಅಭಿವ್ಯಕ್ತಿ–ಪ್ರಕ್ರಿಯೆ

೧. ಕೇಳಿದ, ಓದಿದ, ಗ್ರಹಿಸಿದ ವಿಷಯಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುವುದು.
೨. ನೋಡಿದ ಅಥವಾ ಕೇಳಿದ ಘಟನೆ–ಸನ್ನಿವೇಶಗಳನ್ನು ವರ್ಣನಾತ್ಮಕವಾಗಿ ನಿರೂಪಿಸುವುದು– ವರದಿಮಾಡುವುದು.
೩. ಸೃಜನ ಶೀಲತೆಯನ್ನು ರೂಪಿಸಿಕೊಂಡು ಸಾಹಿತ್ಯವ ಬೇರೆ ಬೇರೆ ಪ್ರಕಾರಗಳಲ್ಲಿ ರಚನೆಗೆ ತೊಡಗುವುದು.
೪. ವಿಮರ್ಶಾತ್ಮಕ, ವಿಶ್ಲೇಷಣಾತ್ಮಕ ಗುಣಗಳನ್ನು ಬೆಳೆಸಿಕೊಳ್ಳುವುದು.

ಈ ಎಲ್ಲಾ ಅಂಶಗಳನ್ನು ಗಮನಿಸುವುದರ ಜೊತೆಗೆ ಜಾಗತೀಕರಣ, ಗಣಕೀಕರಣ, ವಾಣಿಜ್ಯೀಕರಣ, ಖಾಸಗೀಕರಣ, ವೈಜ್ಞಾನಿಕ ಮನೋಧರ್ಮ, ಬದಲಾಗುತ್ತಿರುವ ಕಾಲಮಾನದ ಧೋರಣೆಗಳು, ಸಂವಿಧಾನಾತ್ಮಕ ವಿಚಾರಗಳು, ವೈದ್ಯಕೀಯ ಕ್ಷೇತ್ರದಲ್ಲಿ ಉಂಟಾಗುತ್ತಿರುವ ಆವಿಷ್ಕಾರಗಳು ಮಾನಸಿಕ ಒತ್ತಡದ ಪರಿಸ್ಥಿತಿಯನ್ನು ಸಮನ್ವಯಗೊಳಿಸುವ, ಮಾಹಿತಿ ಹಕ್ಕು, ಪರಿಸರ ಸಂರಕ್ಷಣೆ ಹಗೂ ಸಮೃದ್ಧಿಗೊಳಿಸಲು ಪ್ರೇರೇಪಿಸುವಂತಹ ಲೇಖನಗಳನ್ನು ಆಯ್ಕೆ ಮಾಡುವುದು. ತನ್ಮೂಲಕ ವಿದ್ಯಾರ್ಥಿಗಳು ಬದುಕಿನ ಎಲ್ಲಾ ನಿಟ್ಟಿನಲ್ಲು ತೆರೆದು ಕೊಳ್ಳುವಂತೆ ಉತ್ತೇಜಿಸುವ ಆಯ್ಕೆಗಳನ್ನು ನೀಡುವುದು. ಪಿಯು ಹಂತದ ವಿದ್ಯಾರ್ಥಿಗಳ-ಮನಸ್ಸಿಗೆ ಮುದ ನೀಡುವ ಪಠ್ಯ ಆಯ್ಕೆಯ ಕಡೆಗೆ ಸೂಕ್ಷ್ಮವಾಗಿ ಗಮನಿಸುವುದು ಸೂಕ್ತ.

ಪಠ್ಯವಸ್ತು ಮತ್ತು ದೊರೆಯಬಹುದಾದ ಅವಧಿಗಳ ವಿಂಗಡಣೆಯನ್ನು ಮುಂದಿನಂತೆ ನೀಡಲಾಗಿದೆ.

## ಪ್ರಥಮ ಪಿ.ಯು.ಸಿ.

## ನಿಯೋಜಿತ ಪಠ್ಯ ಪುಸ್ತಕವನ್ನು ಈ ರೀತಿ ವಿಂಗಡಿಸಲಾಗಿದೆ.

<u>ಲಭ್ಯವಾಗುವ ಅವಧಿಗಳು-120</u>

| | | | |
|---|---|---|---|
| ೧. | ಪದ್ಯಭಾಗ | - | 38 ಗಂಟೆಗಳು |
| ೨. | ಗದ್ಯಭಾಗ | - | 32 ಗಂಟೆಗಳು |
| ೩. | ನಾಟಕ | - | 30 ಗಂಟೆಗಳು |
| ೪. | ಭಾಷಾಭ್ಯಾಸ ಮತ್ತು ರಚನೆ (ಪ್ರಯೋಗ ಪುಸ್ತಕ ಸೇರಿ) | - | 20 ಗಂಟೆಗಳು |

## ಪ್ರಥಮ ಪಿ.ಯು.ಸಿ.- ಪಠ್ಯ ವಸ್ತು.

ದೊರೆಯುವ ಅವಧಿಗಳು 120

### I. ಪದ್ಯಭಾಗ

| | | | |
|---|---|---|---|
| ೧. | ಹಳಗನ್ನಡ | - | ಚಂಪೂರೂಪ (15 ರಿಂದ 20 ಪದ್ಯ) ಪಂಪ/ರನ್ನ/ಪೊನ್ನ/ಜನ್ನ/ನಾಗಚಂದ್ರ |
| ೨. | ವಚನ ಸಾಹಿತ್ಯ | - | ಮೂವರು ವಚನಕಾರರ ತಲಾ ಮೂರು ಮತ್ತು ಒಬ್ಬರ ಎರಡು ವಚನಗಳು (ಪ್ರಸಿದ್ಧ ವಚನಕಾರ, ವಚನಕಾರ್ತಿ ಮತ್ತು ಅಲಕ್ಷಿತ ವಚನಕಾರರೊಬ್ಬರು) |
| ೩. | ರಗಳೆ | - | ಹರಿಹರನ ರಗಳೆಗಳಲ್ಲಿ ಒಂದು |
| ೪. | ಷಟ್ಪದಿ | - | ರಾಘವಾಂಕ/ ಲಕ್ಷ್ಮೀಶ (15-20 ಪದ್ಯಗಳಿಗೆ ಸೀಮಿತ)ವಾರ್ಧಕ ಷಟ್ಪದಿ. |
| ೫. | ಕೀರ್ತನೆ | - | ಪ್ರಥಮ ಘಟ್ಟ/ ದ್ವಿತೀಯ ಘಟ್ಟದಿಂದ ಆಯ್ದ ಒಂದು ಕೀರ್ತನೆ. |

೬. ಜಾನಪದ/ತತ್ವಪದ – ಕಥನ ಕಾವ್ಯ/ ತ್ರಿಪದಿ. (3 ಪುಟಗಳಿಗೆ ಮಿರದಂತೆ )

೭. ಸಮಕಾಲೀನ ಸಾಹಿತ್ಯ– ನವೋದಯ, ನವ್ಯ, ದಲಿತ, ಬಂಡಾಯ, ಆಧುನಿಕ ನವ್ಯೋತ್ತರ, ಮುಸ್ಲಿಂ/ಮಹಿಳಾ ಸಂವೇದನೆ.

## II. ಗದ್ಯಭಾಗ

೧. ವೈಚಾರಿಕ ಲೇಖನ – (ನಾಲ್ಕರಿಂದ ï ಐದು ಪುಟಕ್ಕೆ ಮೀರದಂತೆ)

೨. ಲಲಿತ ಪ್ರಬಂಧ/ ನಾಡು ನುಡಿಚಿಂತನೆ – (ನಾಲ್ಕರಿಂದ ï ಐದು ಪುಟಕ್ಕೆ ಮೀರದಂತೆ)

೩. ಆತ್ಮಕಥೆ/ ಜೀವನ ಚಿತ್ರಣ – (ನಾಲ್ಕರಿಂದ ï ಐದು ಪುಟಕ್ಕೆ ಮೀರದಂತೆ)

೪. ಪ್ರವಾಸ ಕಥನ – (ನಾಲ್ಕರಿಂದ ï ಐದು ಪುಟಕ್ಕೆ ಮೀರದಂತೆ)

೫. ಪರಿಸರ ಚಿತ್ರಣ/ ವೈಜ್ಞಾನಿಕ – (ನಾಲ್ಕರಿಂದ ï ಐದು ಪುಟಕ್ಕೆ ಮೀರದಂತೆ)

೬. ಸಣ್ಣ ಕಥೆ – ನವೋದಯ/ಮಹಿಳೆ

೭. ನಡುಗನ್ನಡ – ದುರ್ಗಸಿಂಹ/ಕೆಂಪುನಾರಾಯಣ/ಮುದ್ದಣ

## III. ನಾಟಕ

ಆಧುನಿಕ ನಾಟಕಕಾರರ ಸುಮಾರು 60 ಪುಟಗಳಿಗೆ ಮಿರದ ಒಂದು ನಾಟಕ

## IV. ಭಾಷಾಭ್ಯಾಸ ಮತ್ತು ರಚನೆ

(ಪಠ್ಯದಲ್ಲಿರುವುದನ್ನು ಆಧರಿಸಿ)

ಅ. ಕೂಡಿಸಿ ಮತ್ತು ಬಿಡಿಸಿ ಬರೆಯುವುದರ ಪರಿಚಯ

ಆ. ಪದಗಳ ರೂಪವ್ಯತ್ಯಾಸ, ಅರ್ಥ ವ್ಯತ್ಯಾಸ, ತತ್ಸಮ– ತದ್ಭವ, ದೇಶ್ಯ– ಅನ್ಯದೇಶ್ಯ

ಇ. ಕನ್ನಡ ನುಡಿಗಟ್ಟುಗಳ ವೈಶಿಷ್ಟ್ಯ ಮತ್ತು ವಾಕ್ಯದಲ್ಲಿ ಪ್ರಯೋಗ

ಈ. ಆಡು ಮಾತು ಮತ್ತು ಗ್ರಾಂಥಿಕ ಭಾಷಾರೂಪಗಳ ಸ್ವರೂಪ ಮತ್ತು ಪರಿವರ್ತನೆ

ಉ. ಲೇಖನ ಚಿಹ್ನೆಗಳ ಪರಿಚಯ.

ಊ. ಪ್ರಬಂಧ ರಚನೆ/ಪತ್ರ ಲೇಖನ. (ಅವಶ್ಯವಿದ್ದಲ್ಲಿ ಪ್ರಯೋಗ ಪುಸ್ತಕ ರಚಿಸುವುದು.)

ಭಾಷಾಭ್ಯಾಸ, ರಚನೆ ಮತ್ತು ಪಠ್ಯಗಳ ಪ್ರಶ್ನೆಗಳನ್ನೊಳಗೊಂಡಂತೆ ಪ್ರಯೋಗ ಪುಸ್ತಕ ರಚನೆ ಭಾಷೆ ಕಲಿಯಲು ಹಾಗು ಬರೆಯುವ ಕಲೆ ತಿಳಿಯಲು ಸಹಾಯಕವೆಂದು ಗಮನಿಸಿದೆ. ಪ್ರಯೋಗ ಪುಸ್ತಕ ರಚಿಸ ಬೇಕು.

# ಪ್ರಶ್ನೆಪತ್ರಿಕೆ ಸ್ವರೂಪ

ಸಮಯ: 3.15 ನಿಮಿಷ — ಅಂಕಗಳು: 90

ÓಅÔ ವಿಭಾಗ : ಒಂದು ಅಂಕದ 10 ಪ್ರಶ್ನೆಗಳು — 1×10=10
(ಪದ್ಯ–4, ಗದ್ಯ–3, ನಾಟಕ–3)

ÓಆÔ ವಿಭಾಗ : ಎರಡು ಅಂಕಗಳ 13 ಪ್ರಶ್ನೆಗಳಲ್ಲಿ 10ನ್ನು ಉತ್ತರಿಸುವುದು. — 2×10=20
(ಪದ್ಯ–5, ಗದ್ಯ–4, ನಾಟಕ–4)

ÓಇÔ ವಿಭಾಗ : ಸಂ.ಸೂ. ಟಿಪ್ಪಣಿ– 6 ಪ್ರಶ್ನೆಗಳಲ್ಲಿ 4ನ್ನು ಉತ್ತರಿಸುವುದು. — 3×4=12
(ಪದ್ಯ–3, ಗದ್ಯ–2, ನಾಟಕ–2)

ÓಈÔ ವಿಭಾಗ : ನಾಲ್ಕು ಅಂಕಗಳ 10 ಪ್ರಶ್ನೆಗಳಲ್ಲಿ 7ಕ್ಕೆ ಉತ್ತರಿಸುವುದು. — 4×7=28
(ಪದ್ಯ–4, ಗದ್ಯ–3, ನಾಟಕ–3)

ÓಉÔ ವಿಭಾಗ : ಅಭ್ಯಾಸ ಮತ್ತು ರಚನೆ

(ಅ) ಎರಡು ಪದ್ಯಗಳಲ್ಲಿ ಒಂದರ ಭಾವಾರ್ಥ ಬರೆಯಿರಿ. — 5×1=5

(ಆ) ಭಾಷಾಭ್ಯಾಸ – ನಾಲ್ಕು ಪ್ರಶ್ನೆಗಳಲ್ಲಿ 3ನ್ನು ಉತ್ತರಿಸುವುದು. — 2×3=6

(ಇ) ಎರಡು ಪ್ರಬಂಧಗಳಲ್ಲಿ ಒಂದನ್ನು ಬರೆಯುವುದು. — 5×1=5

(ಈ) ಪತ್ರ ಲೇಖನ/ ವಿಸ್ತರಣೆ (ಎರಡರಲ್ಲಿ ಒಂದು) — 4×1=4

ವಿ.ಸೂ:– 90 ಅಂಕಗಳಿಗೆ ಪ್ರಶ್ನೆ ಪತ್ರಿಕೆ ಸ್ವರೂಪ ಸಿದ್ಧಪಡಿಸಲಾಗಿದೆ. ಒಂದು ವೇಳೆ 100 ಅಂಕಗಳ ಪ್ರಶ್ನೆ ಪತ್ರಿಕೆ ಸಿದ್ದಪಡಿಸಬೇಕಾದಲ್ಲಿ ÓಉÔ ವಿಭಾಗದ (ಆ) ಪ್ರಶ್ನೆಯಲ್ಲಿ ಏಳು ಪ್ರಶ್ನೆಗಳಲ್ಲಿ ಆರು ಪ್ರಶ್ನೆಗಳನ್ನು ಉತ್ತರಿಸಲು ಅವಕಾಶ ಮಾಡಬಹುದು. ಆದೇ ವಿಭಾಗದಲ್ಲಿ ÓಊÔ ಪ್ರಶ್ನೆಯನ್ನು ನೀಡಿ ಗಾದೆ ಮಾತು ವಿಸ್ತರಣೆಗೆ ಅವಕಾಶ ಮಾಡಬಹುದು. ಈ ಸಾಧ್ಯತೆಯಿಂದ ನೂರು ಅಂಕಗಳ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಬಹುದು.

| | | | | | | | |
|---|---|---|---|---|---|---|---|
| **ಪದ್ಯ** | | | | | | | |
| 1 | ಭಾಷಾ ಸ್ವರೂಪ | ಚಂಪೂ | ಇಲ್ಲ | ೦೫ | ರೂಪ, ಅರ್ಥವ್ಯತ್ಯಾಸ, ರಚನೆ | ಹಳೆಗನ್ನಡ ಓದುವುದು | ಪದವಿಭಾಗಿಸುವುದು ತತ್ಸಮ ತತ್ಭವ ಹೂಡುಕುವುದು. ಮಾನವಿಯ ಮೌಲ್ಯ ತಿಳಿಯುವಿಕೆ |
| 2 | ಭಾಷಾ ಸ್ವರೂಪ | ವಚನಗಳು | ೦೩ | ೦೪ | ಕಾವ್ಯ ಶೈಲಿ | ನಡುಗನ್ನಡ ವಾಚನ | ಶರಣ ಚಳುವಳಿಯ ಘಟ್ಟಗಳ ಪರಿಚಯ. |
| 3 | ಕಾವ್ಯ ಶೈಲಿ | ರಗಳೆ | ಇಲ್ಲ | ೦೪ | ಸಮಾನತೆ, ಜ್ಯಾತ್ಯಾತೀತ ಮೌಲ್ಯ | ಮಾನವೀಯ ಸಂಬಂಧಗಳು | ಹರಿಹರನ ಇತರೆ ರಗಳೆ ಗಮನಿಸುವುದು. |
| 4 | ದೇಶಿ ಚಂದಸ್ಸು | ಷಪ್ಪದಿ | ಇಲ್ಲ | ೦೪ | ಸ್ತ್ರೀ ಸಮಾನತೆ | ದುಃಖ, ನಿರೂಪಣೆ | ವನವಾಸ ಸಂದರ್ಭ ಗಮನಿಸುವುದು |
| 5 | ಏಕಾಗ್ರ ಚಿತ್ತ | ಕೀರ್ತನೆ | ಇಲ್ಲ | ೦೨ | ಪ್ರಯತ್ನ ಶೀಲತೆ | ದೃಢನಿರ್ಧಾರ | ದಾಸ ಸಾಹಿತ್ಯವನ್ನು ಸಂಗ್ರಹಿಸುವುದು. |
| 6 | ಶಿಶುಪಾಲನೆ | ಜಾನಪದ | ಇಲ್ಲ | ೦೩ | ವಾತ್ಸಲ್ಯ | ಕರುಣೆ, ಸಮಾನತೆ | ಜಾನಪದ ಮಹಾ ಕಾವ್ಯ ಪರಿಚಯ |
| 7 | ನಾಡ ನುಡಿ | ನವೋದಯ | ಇಲ್ಲ | ೦೨ | ರಾಷ್ಟ್ರೀಯತೆ | ಅಭಿಮಾನ | ನಾಡು ನುಡಿ ಚಿಂತನೆ |
| 8 | ರಾಷ್ಟ್ರೀಯತೆ | ನವ್ಯ | ಇಲ್ಲ | ೦೨ | ಸಂವಿಧಾನ ರಕ್ಷಣೆ | ಭಾರತೀಯತೆ | ಐಕ್ಯತೆ–ಸಮಗ್ರತೆ–ಚಿಂತನೆ |
| 9 | ವ್ಯಕ್ತಿತ್ವ | ನವ್ಯೋತ್ತರ | ಇಲ್ಲ | ೦೨ | ವ್ಯಕ್ತಿತ್ವ ರಚನೆ | ವಾಚನ | ವ್ಯಕ್ತಿ ವಿಕಸನ ಗಮನ. |
| 10 | ಸ್ತ್ರೀ ಸಮಾನತೆ | ಮಹಿಳೆ | ಇಲ್ಲ | ೦೨ | ಭ್ರೂಣ ಹತ್ಯೆ | ಸ್ತ್ರೀಪುರುಷ ಸಮಾನತೆ | ಮಹಿಳಾ ಕಾವ್ಯ ಪರಿಚಯ |
| 11 | ಸ್ತ್ರೀ ಶಕ್ತಿ | ಮುಸ್ಲೀಂ | ಇಲ್ಲ | ೦೨ | ಮತಸಾಮರಸ್ಯ | ಕಾವ್ಯ ವಾಚನ | ಇದೇ ಸಂವೇದನೆಯ ಇತರೆ |

| | | | | | | | |
|---|---|---|---|---|---|---|---|
| | | ಸಂವೇನೆ | | | | | ಕವಿಗಳನ್ನು ಗುರಿತುಸುವುದು. |
| 12 | ಪ್ರಕೃತಿ | ಪರಿಸರ ಸಂರಕ್ಷಣೆ | ಇಲ್ಲ | ೦೨ | ಪರಿಸರ ಪ್ರಜ್ಞೆ | ಪರಿಸರದ ಹೆಚ್ಚರಿಕೆ | ಪರಿಸರ ರಕ್ಷಣೆ ಕಾರ್ಯ ಚಟುವಟಿಕೆಗಳು. |
| 13 | ಜಾತ್ಯಾತೀ ಕಲ್ಪನೆ | ದಲಿತ | ಇಲ್ಲ | ೦೨ | ಸಮಾನತೆ | ವರ್ಗರಹಿತ ಸಾನಾಬತೆ | ದಲಿತ ಸಾಹಿತ್ಯ ಪರಿಚಯ. |
| 14 | ಇಂದನ | ಹೊಸದು | ಇಲ್ಲ | ೦೨ | ಇಂಧನ ಅರಿವು | ಇಂಧನ ಬಳಕೆ ಪ್ರಜ್ಞೆ | ಜೈವಿಕ ಇಂಧನ ಬಳಕೆಯ ಮಹತ್ವ. |
| **ಗದ್ಯ ಭಾಗ** | | | | | | | |
| 1 | 7 ಗದ್ಯಭಾಗಗಳಿದ್ದು | ೩೨ | ರಾಷ್ಟ್ರೀಯತೆ ವ್ಯಕಿ ಚಿತ್ರ ಸಾಮಾಜಿಕ ವ್ಯವಸ್ಥೆ. ಲಲಿತ ಸಾಹಿತ್ಯ, ಪ್ರವಾಸದ ಅನುಭವ, ಹಾಸ್ಯ | | | ಗದ್ಯ ರಚನಾ ವೈವಿಧ್ಯ ಪರಿಚಯ | ಇದೇ ರೀತಿಯ ಗದ್ಯವನ್ನು ಗಮನಿಸುವುದು. ಪ್ರತ್ಯೇಕವಾಗಿ ಪಠ್ಯ ಪುಸ್ತಕದಲ್ಲಿ ಚಟುವಟಿಕೆಗಳನ್ನು ನೀಡಲಾಗಿದೆ. |

| | | | | | | | |
|---|---|---|---|---|---|---|---|
| **ನಾಟಕ** | | | | | | | |
| 1 | ಸಮಾನತೆ, ಶ್ರಮ ಸಂಸ್ಕೃತಿ, ಭ್ರಾಮಕ ಬಂದನ ಬಿಡುಗಡೆ | ಬೋಳೇಶಂಕರ. ಡಾ. ಚಂದ್ರಶೇಕರ ಕಂಬಾರ | | ೩೦ | ಶ್ರಮದಮಹತ್ವ, ದುಡಿಮೆಯ ಶಕ್ತಿ, ಗ್ರಾಮೀಣ ಜೀವನ ಪರಿಚಯ, | ನಾಟಕ ರಚನೆ ವಿನ್ಯಾಸ, ರೂಪಗಳ ಪರಿಚಯ | ಹಳೇಯ ಮತ್ತು ಹೊಸ ನಾಟಕಗಳ ವಸ್ತು, ರಚನೆ, ಮಂಡನೆ, ಪರಿಚಯ. |
| 1 | ರಚನಾ ಕಲ್ಪನೆ, | ಭಾಷಾಭ್ಯಾಸ | 06 ಘಟಕಗಳು | ೨೦ | ಕೌಶಲ್ಯ, ಪ್ರಯೋಗ | ಬರವಣಿಗೆ ಮಹತ್ವ | ವ್ಯಾಕರಣ ಅಂಶ, ಭಾಷಾ ಬಳಿಕೆ. |